

ಪಕ್ಕಕ್ಕೆ ಸರಿಸಿದ್ದುದರಿಂದ ಇದು ಕಾಣುತ್ತಿದೆ. ಇಲ್ಲದಿದ್ದರೆ ಅದೂ ಇಲ್ಲ. ಆದರೆ ಸೂರ್ಯ ಅವಳ ಜೊತೆ ಏನನ್ನೋ ಮಾತಾಡಿದಂತೆ ಇತ್ತು. ಮಾತಾಡಿದ ಕೂಡ. ಇವಳೇ ಮಾತಾಡಿದಳು. ದೂರವಿರುವುದರಿಂದ ಕೇಳುತ್ತಿಲ್ಲ ಅಷ್ಟೆ. ಆದರೆ ಇಬ್ಬರ ನಡುವೆ ಸಂಭಾಷಣೆ ಮಾತ್ರ ಇತ್ತು. ಮತ್ತೆ ಛತ್ರಿಯನ್ನು ಮೊದಲಿನ ಹಾಗೆ ಹಿಡಿದುಕೊಂಡಳು. ಈಗ ಸೂರ್ಯನೂ ಕಾಣುತ್ತಿಲ್ಲ. ಇಷ್ಟೊತ್ತಿಗೆ ಮುಳುಗಿಹೋಗಿರುತ್ತಾನೆ. ಮುಳುಗಿಹೋಗಿರುವ ಸೂರ್ಯನನ್ನು ಅವಳ ಜೊತೆ ಏನು ಮಾತಾಡಿದೆ ಎಂದು ಹೇಗೆ ತಾನೇ ಕೇಳಲು ಆಗುತ್ತದೆ.

ಈಗ ಬಲಕ್ಕೆ ತಿರುಗಿಸಿದಳು. ಅವಳು ಯಾಕೆ ತಿರುಗಿಸಿದಳು, ಗೊತ್ತಿಲ್ಲ. ಎದುರಿಗೆ ಪ್ರಪಾತ. ಮರ ಇಲ್ಲ, ಗಿಡವಿಲ್ಲ, ನೀರಿಲ್ಲ. ಆಳ ನೋಡಿದಷ್ಟು. ಪುನಃ ಎಡಕ್ಕೆ. ಈಗ ಎಲೆಯೇ ಇಲ್ಲ. ಎಲ್ಲಿ ಎಲೆ, ಅದು ಎಲೆಯೋ ಮಚ್ಚೆಯೋ ಅಚ್ಚೆಯೋ ಯಾರಿಗೆ ಗೊತ್ತು. ಸುಮ್ಮನೇ ಕುಳಿತಿದ್ದಾಳೆ. ಅದು ಮಾತ್ರ ಕಾಣುತ್ತಿದೆ. ಈಗ ಛತ್ರಿಯನ್ನು ಆಚೆ ಈಚೆ ಮಾಡುತ್ತಿದ್ದಾಳೆ. ಗಾಳಿಯೂ ಹಾಗೆ ಮಾಡಿಸುತ್ತಿರಬಹುದು. ಹೌದು, ಅದು ಹಾಗೆ ಮಾಡಿಸುತ್ತಿದೆ. ಯಾಕೆಂದರೆ ಧುತ್ತನೆ ಗಾಳಿ ಎದ್ದು ಅವಳ ಛತ್ರಿಯನ್ನು ಮೇಲಕ್ಕೆ ಹಾರಿಸಿತು. ಯಾರೋ ಅದನ್ನು ಎತ್ತಿಕೊಂಡು ಹೋಗುತ್ತಿದ್ದಾರೇನೋ ಎನ್ನುವ ಪರಿಯಲ್ಲಿ ಹಾರಿ ಹೋಗುತ್ತಿದೆ ಮೇಲಕ್ಕೆ. ಹಾರಿಸಿತು ಗಾಳಿ. ಅವಳ ಎದುರಿಗೆ ಬಯಲು. ಏನೂ ಇಲ್ಲದ ಬಯಲು. ಈ ಇಂತಹ ಏನೂ ಇಲ್ಲದ ಬಯಲಲ್ಲಿ ಎಲ್ಲೋ ಒಂದು ಕಡೆ ಅಂಗೈಯಗಲದಷ್ಟು ನೀರಿನ ಕೊಳ. ಅಲ್ಲಿ ಮೀನುಗಳು. ಆ ಮೀನುಗಳು ಛತ್ರಿ ಆಕಾಶಮುಖ ಮಾಡಿ ಹಾರುತ್ತಿರುವುದನ್ನು ಸೋಜಿಗದಲ್ಲಿ ನೋಡುತ್ತಿವೆ ಪಾರದರ್ಶಕ ಜಲದಲ್ಲಿ. ಈಜುವುದ ನಿಲ್ಲಿಸಿ. ನೀರು ಕಾಣುವುದೇ ಇಲ್ಲ. ಅಂಗೈಯಗಲದ ಕೊಳ. ಇರುವುದು ದೂರ. ಅವಳಿಗೂ ಕಾಣುತ್ತಿಲ್ಲ. ಇದು ಎಲ್ಲೋ ದೂರದಲ್ಲಿ ನಡೆಯುವ ಘಟನೆ. ಆದರೆ ಛತ್ರಿ ಹಾರಿ ಹೋದದ್ದು ಅವಳಿಗೆ ಗೊತ್ತಾಗಲಿಲ್ಲ. ಕತ್ತಿನ ಕೆಳಗೆ ಇಷ್ಟಗಲದ ಬೆನ್ನು ಆಗಲೇ ನೀವು ಕಂಡಿದ್ದಿರಲ್ಲ; ಅದು ನುಣುಪಾಗಿದೆ ಬೆಣಚು ಕಲ್ಲಿನ ಥರ. ನುಣುಪಾಗಿ ಕಾಣುತ್ತಿದೆ. ವಸ್ತ್ರವೊಂದನ್ನು ಹಿಂದಕ್ಕೆ ಎಳೆದುಕೊಂಡಳು. ಈಗ ಅದು ಮುಚ್ಚಿಹೋಯಿತು. ಹಳದಿ ಬಣ್ಣದ ವಸ್ತ್ರ. ಅದು ಸೆರಗಾ ಅಥವಾ ದುಪ್ಪಟ್ಟವಾ ಗೊತ್ತಿಲ್ಲ. ಆದರೆ ಸೆರಗಾಗಿದ್ದರೆ ಮದುವೆಯಾಗಿರುವ ಮಹಿಳೆಯೆಂದೋ ಅಥವಾ ದುಪ್ಪಟ್ಟವಾಗಿದ್ದಿದ್ದರೆ ಮದುವೆಯಾಗದ ಯುವತಿಯೆಂದೋ ಅಭಿಪ್ರಾಯಕ್ಕೆ ಬರುತ್ತಿದ್ದಿರಿ ನೀವು. ಬರುತ್ತೀರಿ. ಆದರೆ ಬರಲಾರಿರಿ. ಏಕೆಂದರೆ ಅವಳು ದೂರ ಇದ್ದಾಳೆ. ಅದು ದುಪ್ಪಟ್ಟವೋ ಸೆರಗೋ ನಿರ್ದಿಷ್ಟವಾಗಿ ಹೇಳಲಾಗುವುದಿಲ್ಲ. ಅವಳೂ ಸುಮ್ಮನೆ ಕುಳಿತಿದ್ದಾಳೆ. ಅಥವಾ ಹಾಗೆ ಕಾಣಿಸುತ್ತಿದ್ದಾಳೆ. ಆದರೆ ನೋಡಿದವರು ಅವಳು ಯಾಕೆ ಅಲ್ಲಿ ಒಂಟಿ ಕುಳಿತಿದ್ದಾಳೆ ಎಂದು ಯೋಚಿಸುತ್ತಾರೆ. ಮತ್ತೂ, ಅವಳು ಛತ್ರಿಯನ್ನು ಯಾಕೆ ಹಿಡಿದುಕೊಂಡಿದ್ದಾಳೆ, ಮಳೆಯೂ ಇಲ್ಲ, ಬಿಸಿಲೂ ಇಲ್ಲ. ಮಳೆಯಿದ್ದರೆ ಅಥವಾ ಬಿಸಿಲಿದ್ದರೆ ಮಾತ್ರ ಛತ್ರಿಯನ್ನು